**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**
**ಎಸ್.ಸಿ. ಸಂಃ10042/2021.**

ಪಿಡಬ್ಲೂ–8

ಸಿಡಬ್ಲೂ–10

ಸಾಕ್ಷಿ ಹೆಸರು – ಶೀಲಾ

ಗಂಡನ ಹೆಸರು – ತಿಮ್ಮಪ್ಪ

ವಯಸ್ಸು – 35 ವರ್ಷ

ಉದ್ಯೋಗ – ಕೂಲಿ ಕೆಲಸ

ವಾಸಃ – ಶಾನುವಳ್ಳಿ ಗ್ರಾಮ, ಸೊರಬ ತಾಲ್ಲೂಕು.

**ಪ್ರಮಾಣ ವಚನ ಭೋದಿಸಿದ ದಿನಾಂಕಃ 10–10–2024**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ನನಗೆ ಪ್ರಾ ಸಾ –1 , ಪ್ರಾ ಸಾ –2, ಚಾಸಾ13 ರವರು ಗೊತ್ತು. ಪ್ರಾ ಸಾ 4 ರಿಂದ ಪ್ರಾ ಸಾ7 , ಚಾಸಾ9 ಮತ್ತು ಚಾಸಾ– 12 ರವರ ಪರಿಚಯ ಇದೆ. ಚಾಸಾ– 11 ನನ್ನ ಗಂಡ. ಆರೋಪಿಯನ್ನು ನಾನು ಕೂಲಿ ಕೆಲಸಕ್ಕೆ ಹೋದಾಗ ನೋಡಿದ್ದೇನೆ . ಪ್ರಾ ಸಾ –1 ರವರ ಜಮೀನಿಗೆ ಕೂಲಿ ಕೆಲಸಕ್ಕೆ ಹೋಗಿರುತ್ತೇನೆ. ನನ್ನ ಜೊತೆಯಲ್ಲಿ ಚಾಸಾ 9, ಚಾಸಾ–11, ಚಾಸಾ12 ಮತ್ತು ಪ್ರಾ ಸಾ –4 ರವರು ಪ್ರಾ ಸಾ –1 ರವರ ಮೆಕ್ಕೆ ಜೋಳ ಮುರಿಯಲು ಮೇ 2020 ರಲ್ಲಿ ಹೋಗಿದ್ದೆವು. ದಿನಾಂಕ ಗೊತ್ತಿಲ್ಲ. ಪ್ರಾ ಸಾ –1 ರವರು ಮೆಕ್ಕೆ ಜೋಳವನ್ನು ಟ್ರಾಕ್ಟರ್ ನಲ್ಲಿ ಲೋಡ್ ಮಾಡಿದ್ದರು. ಮೆಕ್ಕೆ ಜೋಳ ಲೋಡ್ ಆದ ನಂತರ ಟ್ರಾಕ್ಟರ್ ನ್ನು ಪ್ರಾ ಸಾ –2 ರವರು ಚಲಾಯಿಸುತ್ತಿದ್ದು ಸದರಿ ಟ್ರಾಕ್ಟರ್ ನಲ್ಲಿ ಪ್ರಾ ಸಾ – 1 ರಿಂದ ಪ್ರಾ ಸಾ –3 ಚಾಸಾ13 , ರವರು ಕೂತಿದ್ದರು. ಟ್ರಾಕ್ಟರ್ ನ್ನು ಆರೋಪಿಯ

ಜಮೀನಿನ ಮುಖಾಂತರ ಮದ್ಯಾಹ್ನ 3–30 ಗಂಟೆಗೆ ಚಲಾಲಯಿಸಿಕೊಂಡು ಹೋಗುತ್ತಿದ್ದರು . ಆಗ ಆರೋಪಿಯು ಅಲ್ಲಿಗೆ ಬಂದಿದ್ದು ನಮ್ಮ ಗದ್ದೆಯಲ್ಲಿ ಯಾಕೆ ಟ್ರಾಕ್ಟರ್ ಹೊಡೆದುಕೊಂಡು ಹೋಗುತ್ತೀರಿ ಎಂದು ಅವಾಚ್ಯವಾಗಿ ಬೈದು ದೊಣ್ಣೆಯಿಂದ ಪ್ರಾ ಸಾ –2 ರವರ ತಲೆಗೆ ಹೊಡೆದಿರುತ್ತಾರೆ. ತಲೆಗೆ ಹೊಡೆದ ನಂತರ ಪ್ರಾ ಸಾ–2 ರವರು ಕೆಳಗೆ ಬಿದ್ದರು. ಅವರ ತಲೆಯಿಂದ ಯಾವುದೇ ರಕ್ತ ಬಂದಿಲ್ಲ ಆದರೆ ಬಾವು ಬಂದಿರುತ್ತದೆ. ಆರೋಪಿಯು ಹೋಗುವಾಗ ದೊಣ್ಣೆಯನ್ನು ಬಿಸಾಡಿ ಓಡಿ ಹೋಗಿರುತ್ತಾನೆ. ನಂತರ ಪ್ರಾ ಸಾ –2 ರವರನ್ನು ಪ್ರಾ ಸಾ –1, ಚಾಸಾ–13 ರವರು ಓಮಿನಿಯಲ್ಲಿ ಆನವಟ್ಟಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

ಆರೋಪಿಯು ಪ್ರಾ ಸಾ –2 ರವರನ್ನು ಕೊಂದೇ ಬಿಡುತ್ತೇನೆ ಎಂದು ದೊಣ್ಣೆಯಿಂದ ಹೊಡೆದಿರುತ್ತಾನೆ. ಆರೋಪಿಯು ಪ್ರಾ ಸಾ –2 ರವರಿಗೆ ಹೊಡೆಯಲು ಉಪಯೋಗಿಸಿದ ದೊಣ್ಣೆಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ದೊಣ್ಣೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ –1 ಎಂದು ಗುರುತಿಸಲಾಗಿದೆ. ಆರೋಪಿಯು ನ್ಯಾಯಾಲಯದ ಮುಂದೆ ಹಾಜರು ಇದ್ದು ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಒಂದು ವಾರ ಬಿಟ್ಟು ಪೋಲೀಸ್ ಠಾಣೆಗೆ ಹೋಗಿ ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ**

ನಾನು ಪ್ರಾ ಸಾ –1 ರವರ ಜಮೀನಿಗೆ ಕೂಲಿ ಕೆಲಸಕ್ಕೆ 2 –3 ಸಲ ಹೋಗಿರುತ್ತೇನೆ. ಜೋಳ ತುಂಬಿದ ಜಾಗಕ್ಕೂ ಟ್ರಾಕ್ಟರ್ ನಿಂತ ಜಾಗಕ್ಕೂ ಪಕ್ಕಪಕ್ಕ ಇರುತ್ತದೆ. ಜೋಳ ತುಂಬಿದ ಜಾಗದಿಂದ ಒಂದು ಮಾರು ದೂರ ಟ್ರಾಕ್ಟರ್ ನ್ನು ಹೊಡೆದುಕೊಂಡು ಹೋಗಲಾಗಿತ್ತು. ನಾವು ಜೋಳ ತುಂಬಿದ ಜಾಗದಿಂದ ಟ್ರಾಕ್ಟರ್ ಸ್ವಲ್ಪ ದೂರದಲ್ಲಿ ಇತ್ತು.

ಯಾವಾಗಲೂ ಅದೇ ರಸ್ತೆಯಲ್ಲಿ ಟ್ರಾಕ್ಟರ್ ನ್ನು ಹೊಡೆದುಕೊಂಡು ಹೋಗುತ್ತಿದ್ದರು ಎಂದರೆ ಹೌದು. ನನ್ನ ಗಂಡ ಪ್ರಾ ಸಾ –1 ರವರ ಜಮೀನಿಗೆ 3 ವರ್ಷದಿಂದ ಕೆಲಸ ಮಾಡುತ್ತಿದ್ದಾರೆ . ನಾನು 2–3 ವಾರಗಳಿಂದ ಮಾತ್ರ ಕೆಲಸಕ್ಕೆ ಹೋಗುತ್ತಿದ್ದೆ. ಸದರಿ ದಿನ ನಾನು ಜೋಳ ಮುರಿಯುತ್ತಿದ್ದೆ. ಜೋಳದ ಗಿಡಗಳು ನನ್ನಷ್ಟು ಎತ್ತರ ಇರುತ್ತವೆ ಎಂದರೆ ಹೌದು. ಸಾಮಾನ್ಯವಾಗಿ ಜೋಳದ ಗಿಡದ ಮಧ್ಯದಲ್ಲಿ ನಿಂತರೆ ಅಕ್ಕಪಕ್ಕ ಕಾಣುವುದಿಲ್ಲ ಎಂದರೆ ಸರಿಯಲ್ಲ.

(ಆರೋಪಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು ಪ್ರಕರಣವನ್ನು ಮುಂದುವರೆದ ಪಾಟೀಸವಾಲಿಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).